ಮೈಸೂರು ಜಿಲ್ಲೆಗೆ ಮನೆಗಳ ಮಂಜೂರಾತಿ

4887 - ಶ್ರೀ ಪಾಪಣ್ಣ ವಿ. (ಹುಣಸೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಜಿಲ್ಲೆ ಪ್ರತಿ ತಾಲ್ಲೂಕಿಗೆ 1999-2000 ಎಷ್ಟು ಮನೆಗಳು ಮಂಜೂರಾತಿ ಆಗಿದ್ದು ವಿವರ ಕೊಡುವರೆ?*

ಆ) *ಮೈಸೂರು ಜಿಲ್ಲೆ ಪ್ರತಿ ತಾಲ್ಲೂಕಿಗೆ 2000-2001 ಎಷ್ಟು ಮನೆಗಳು ಮಂಜೂರಾತಿಗೆ ಕೊಟ್ಟಿದ್ದಾರೆ?*

ಇ) *1999-2000 ಮಂಜೂರಾತಿ ಆಗಿದ್ದ ಮನೆಗಳಿಗೆ ಹಣ ಬಿಡುಗಡೆ ಆಗಿಲ್ಲಾ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಏನು ಕ್ರಮ ಕೈಗೊಂಡಿದ್ದೀರಿ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) 1999-2000ನೇ ಸಾಲಿನಲ್ಲಿ ರಾಜ್ಯದಲ್ಲಿ ಆಶ್ರಯ ಯೋಜನೆಯಡಿ ಹೊಸದಾಗಿ ಗುರಿ ನೀಡಿರುವುದಿಲ್ಲ. 1998-99 ನೇ ಸಾಲಿನ ಹೆಚ್ಚುವರಿ ಗುರಿಯನ್ನೇ ಮುಂದುವರಿಸಲಾಗಿದೆ. 1999-2000 ನೇ ಸಾಲಿಗೆ ಕ್ಷೇತ್ರವಾರು ನಗರ ಗುರಿಯನ್ನು ನೀಡಿದೆ.

ಕ್ರಮ ಸಂಖ್ಯೆ	ಕ್ಷೇತ್ರ	ನಗರ
1	ಚಾಮುಂಡೇಶ್ವರಿ	0
2	ಕೃಷ್ಣರಾಜ	493
3	ಹುಣಸೂರು	85
4	ಬನ್ನೂರು	200
5	ಟಿ. ನರಸೀಪುರ	25
6	ಚಾಮರಾಜ	493
7	ನಂಜನಗೂಡು	100
8	ಹೆಗ್ಗಡದೇವನಕೋಟೆ	20
9	ಪಿರಿಯಾಪಟ್ಟಣ	30
10	ಕೃಷ್ಣರಾಜನಗರ	67
11	ನರಸಿಂಹರಾಜ	493
	ಒಟ್ಟು	**2006**

ಅ) 2000-01ನೇ ಸಾಲಿಗೆ ತಾಲ್ಲೂಕುವಾರು ಗುರಿಗಳನ್ನು ನೀಡಿರುವುದಿಲ್ಲ. ಆದರೆ ಕ್ಷೇತ್ರವಾರು ಗುರಿಗಳನ್ನು ನೀಡಲಾಗಿದೆ. ಕ್ಷೇತ್ರವಾರು ಗುರಿಯ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕ್ಷೇತ್ರ	ಗ್ರಾಮೀಣ	ನಗರ
1	ಚಾಮುಂಡೇಶ್ವರಿ	0	766
2	ಕೃಷ್ಣರಾಜ	440	0
3	ಹುಣಸೂರು	85	766
4	ಬನ್ನೂರು	45	766
5	ಟಿ. ನರಸೀಪುರ	25	766
6	ಚಾಮರಾಜ	440	0
7	ನಂಜನಗೂಡು	110	766
8	ಹೆಗ್ಗಡದೇವನಕೋಟೆ	20	766
9	ಪಿರಿಯಾಪಟ್ಟಣ	30	766
10	ಕೃಷ್ಣರಾಜನಗರ	65	766
11	ನರಸಿಂಹರಾಜ	440	0

ಇ) 1999-2000 ನೇ ಸಾಲಿನಲ್ಲಿ ನಗರದ ಗುರಿಗಾಗಿ ಒಟ್ಟು ರೂ. 501.50 ಲಕ್ಷಗಳನ್ನು ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ.

ಕೆ.ಎಂ.ಎಫ್. ಸಂಸ್ಥೆಗೆ ಕೋರಮಂಗಲ ಪ್ರದೇಶದಲ್ಲಿ ಸರ್ಕಾರಿ ಜಮೀನು ಮಂಜೂರು

4890 - ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಂ.ಎಫ್. ಸಂಸ್ಥೆಗೆ ಕೋರಮಂಗಲ ಪ್ರದೇಶದಲ್ಲಿ ಎಷ್ಟು ವಿಸ್ತೀರ್ಣದ ಸರ್ಕಾರಿ ಜಮೀನನ್ನು ಯಾವ ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆ? (ವಿವರಗಳನ್ನು ಒದಗಿಸುವುದು)

ಆ) ಇದರ ಪೈಕಿ ಕೆ.ಎಂ.ಎಫ್.ರವರು ಇತರೇ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ನೀಡಿರುವ ಪ್ರದೇಶದ ವಿಸ್ತೀರ್ಣ ಮತ್ತು ಉದ್ದೇಶಗಳ ವಿವರಗಳನ್ನು ಒದಗಿಸುವುದು?

ಇ) ಇದಕ್ಕೆ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :